ಎನ್ನುವುದು ಅವರ ಕಲ್ಪನೆಗೆ ದಕ್ಕದ ವಿಚಾರ. ಅವರ ಗಮನವೆಲ್ಲಾ ಬಾಕ್ಸಿನಲ್ಲಿರುವ ಸಿಹಿಯ ಕಡೆಗೆ. ಮಧುಮೇಹ ಗಂಟು ಬಿದ್ದಾಗಿನಿಂದ ಸಿಹಿ ಅನ್ನುವುದು ಅಪರೂಪದ ವಸ್ತುವಾಗಿಬಿಟ್ಟಿತ್ತು ಮತ್ತು ಸಿಹಿ ಅಂದರೆ ತಮಗೆ ಪಂಚಪ್ರಾಣ ಎನ್ನುವ ಸತ್ಯ ಮಧುಮೇಹ ಶುರುವಾದಾಗಿನಿಂದ ರಾಯರ ಅರಿವಿಗೆ ಬಂದಿತ್ತು. ಪಥ್ಯ, ಪಾನಗಳ ವಿಷಯದಲ್ಲಿ ವೈಷ್ಣವಿ ತುಂಬಾ ಕಟ್ಟುನಿಟ್ಟು. ಈ ವಿಷಯ ಫಲ್ಗುಣನಿಗೆ ಗೊತ್ತಿಲ್ಲದ್ದಲ್ಲ. ಹಾಗಾಗಿಯೇ ಅವಳು ಮೈಸೂರುಪಾಕಿನ ತುದಿ ಮುರಿದು ಪ್ರಸಾದದಂತೆ ರಾಯರಿಗೆ ಕೊಡುತ್ತಾಳೆಂಬ ಸತ್ಯ ಗೊತ್ತಿದ್ದವನು ತಾನೇ ಮೇಲೆದ್ದು ಅವಳ ಕೈಲಿದ್ದ ಬಾಕ್ಸು ತೆಗೆದುಕೊಂಡು ರಾಯರ ಮುಂದೆ ಹಿಡಿದ. ಅಪ್ಪಣೆಗೆಂಬಂತೆ ಮಗಳ ಮುಖ ನೋಡಿದರು ರಾಯರು. ಅರ್ಥವಾಯ್ತು ಫಲ್ಗುಣನಿಗೆ.

"ಇವತ್ತೊಂದಿನ ಸ್ವೀಟ್ ತಿನ್ಲಿ ಬಿಡ್ರೀ. ಒಂದಿನ ತಿಂದ್ರೆ ಏನಾಗಲ್ಲ" ರಾಯರನ್ನು ವಹಿಸಿಕೊಂಡ ಫಲ್ಗುಣ. ಇಷ್ಟು ಹೇಳಿದ್ದೇ ಸಾಕೆಂಬಂತೆ ರಾಯರು ಇಡೀ ಮೈಸೂರುಪಾಕಿನ ತುಂಡನ್ನು ಎತ್ತಿಕೊಂಡು ಅದರ ರುಚಿಯನ್ನು ಆಸ್ವಾದಿಸತೊಡಗಿದರು. ಬಾಕ್ಸು ವೈಷ್ಣವಿಯ ಎದುರು ಬಂತು. ನೈಲ್‌ಪಾಲಿಶ್‌ನಿಂದ ಸುಶೋಭಿತವಾದ ತನ್ನ ಕೋಮಲ ಬೆರಳುಗಳಿಂದ ಒಂದು ತುಂಡು ಎತ್ತಿಕೊಂಡಳು ವೈಷ್ಣವಿ, ಅದೂ ಒಂದು ಕಲೆಗಾರಿಕೆ ಎಂಬಂತೆ.

"ಬಿಸಿ ಆರದಿದ್ದ ಹಾಗೆ ತಗೊಂಬಂದಿದೀರಲ್ರೀ? ಪರವಾಗಿಲ್ಲ ನೀವು" ಮೆಚ್ಚುಗೆ ಸೂಚಿಸಿದಳು.

"ಬಿಸಿಯಾಗಿದ್ರೆ ಒಂಥರಾ ರುಚಿ. ಬಿಸಿ ಆರಿದ್ರೆ ಮತ್ತೊಂದು ಥರ..." ತಾನೂ ಒಂದು ತುಂಡನ್ನೆತ್ತಿ ಬಾಯಲ್ಲಿಟ್ಟುಕೊಳ್ಳುತ್ತಾ ಹೇಳಿದ ಫಲ್ಗುಣ.

"ಆದ್ರೂ ಬಿಸಿಯಾಗಿದ್ರೆ ಅದರ ರುಚೀನೇ ಬೇರೆ..."

"ಬಿಸಿ ಮಾಡೋದು ಯಾವ ಕಷ್ಟಾನ್ರೀ? ಓವನ್‌ನಲ್ಲಿಟ್ರೆ ಚುರುಚುರು ಅನ್ನುವಷ್ಟು ಬಿಸಿಯಾಗಿಬಿಡುತ್ತೆ..."

ಮತ್ತೆ ಕೆಂಪಾಯಿತು ವೈಷ್ಣವಿಯ ಕದಪು.

"ಕತೆ, ಕವಿತೆ ಬರಿಯೋಕೆ ಲಾಯ್ಕಿದೀರಿ ನೀವು..." ಛೇಡಿಸಿದಳು ವೈಷ್ಣವಿ.

"ಯಾಕಾಗ್ಬಾರ್ದು? ನಾಳೆಯಿಂದ ಅದೇ ಕೆಲಸ. ದಿನಾ ಒಂದೊಂದು ಕವಿತೆ ಬರೆದು ತಂದ್ಕೊಡ್ತೀನಿ. ನೀವು ವಿಮರ್ಶೆ ಮಾಡಿ..."

"ಅದೇನದು, ಮಾತು ಮಾತಿಗೂ ನಾಳೆಯಿಂದ ಅಂತಿದೀರಲ್ಲ? ನಾಳೆ ತುಂಬಾ ಒಳ್ಳೆಯ ದಿನಾನಾ?"

"ಹೇಳ್ತೀನಿ ಇರಿ..."

ತಂದಿದ್ದ ಮತ್ತೊಂದು ಪ್ಯಾಕನ್ನು ಒಡೆದು ಹದವಾಗಿ ಉಪ್ಪು, ಖಾರ ಬೆರೆತ ಗೋಡಂಬಿಯನ್ನು ಎಲ್ಲರ ಬೊಗಸೆ ತುಂಬಿದ ಫಲ್ಗುಣ. ರಾಯರಿಗೆ ಪರಮ ಸಂತೃಪ್ತಿಯಾಯ್ತು. 'ಕಾಫಿ...' ಎಂದು ಅವರು ಬಾಯಿ ತೆರೆಯುವುದರೊಳಗೆ ಕೆಲಸದಾಕೆ ಟ್ರೇಯಲ್ಲಿ ಕಾಫಿಯ ಕಪ್ಪು ಜೋಡಿಸಿಕೊಂಡು ತಂದು ಎಲ್ಲರೆದುರೂ ವಿನಮ್ರತೆಯಿಂದ ಹಿಡಿದಳು.

"ಈಗ ಹೇಳಿ ಸಾಹೇಬ್ರೇ, ಏನಿವತ್ತು ವಿಶೇಷ? ಸ್ವೀಟು ಗೀಟು ತಂದಿದೀರಿ?" ಕೇಳಿದಳು ವೈಷ್ಣವಿ.

"ವಿಶೇಷ ಇದ್ರೆ ಮಾತ್ರಾ ತರ್ಬೇಕಾ?"

"ಹಾಗಲ್ಲ. ಎಲ್ಲಾದಕ್ಕೂ ಒಂದು ಕಾರಣ ಇರ್ಬೇಕಲ್ಲ?"

ಕಾಫಿಯ ಕೊನೆಯ ಗುಟುಕು ಕುಡಿದು ಕಪ್ಪನ್ನು ಟೀಪಾಯಿಯ ಮೇಲಿಡುತ್ತಾ ಬಾಯ್ಬಿಟ್ಟ ಫಲ್ಗುಣ.